‘ಅಲಾ ಚಿಕ್ಕಮ್ಮಾ, ಅಪ್ಪಯ್ಯಯಾಗ್ಲೀ, ಅಮ್ಮಯಾಗ್ಲೀ ಇದು ನಿಮ್ದೂಂತಾ ಯೆಂತೂ ಎತ್ತಿಟ್ಟು ಹೇಳಿದಂತವೇ ಅಲ್ಲಾ. ಈಗೆಂತ ಕೊಡೂದೂ? ಇಲ್ಲೆಂತಿದೆ ಮಣ್ಣಂಗಟ್ಟಿ! ನಿಮ್ದುಂತಾ ಯೆಂತುಂಟು, ಯೆಂತಂದ್ರೆ ಯೆಂತೂ ಇಲ್ಲಾ! ಚಿಕ್ಕಪ್ಪಯ್ಯ ಬದ್ಕಿದಂಗಲೇ ಯೆಲ್ಲಾ ಎತ್ಕಂಡ್ ಹ್ವಾಗಿ ಮಂಗ್ಳೂರ್ಗೆ ಗಾಂಧೀಜಿ ಬಂದ್ರಂತಾ ಹ್ವಾಗಿ ಕೊಟ್ ಕೈ ಖಾಲಿ ಮಾಡ್ಕಂಡಿದಲಾ ಚಿಕ್ಕಮ್ಮಾ! ಅಲಾ ಶ್ರೀಪಾದ, ನೀ ಬೆಂಗ್ಳೂರು ಪೇಟೇಲಿ ಸುಖವಾಗಿದ್ದಿ ಹೋದ್ಯೋ ಅಲ್ಲೋ? ದೊಡ್ಡ ಮನೆಯೇನೋ ಸೈ, ಅದ್ಕೂ ಗೋಡೆಯೆದ್ದು ಇಷ್ಟು ಉಳ್ಕಂಡದೆ. ನಮ್ಮದೆಂತಾ ಫಜೀತೀಂತಾ ಯೆಂತಾರ ಗೊತ್ತುಂಟಾ ಮಾರಾಯ ನಿಂಗೆ? ಆಳಿಲ್ಲ ಕಾಳಿಲ್ಲ ಗದ್ದೆ ಊಳೋರಿಲ್ಲ. ಯೆಲ್ಲಾ ಪಾಳು ಬಿದ್ದೋಗಿದೆ ಮರಾಯ. ಎಡ್ಡೊತ್ತು ಊಟಕ್ಕೂ ತತ್ವಾರ!’

ಯಾಕೋ ಶ್ರೀಪಾದನಿಗೆ ಕಿರಿಕಿರಿಯಾಗಲು ಶುರುವಾಯಿತು. ಇಷ್ಟು ವರುಷದ ಘನತೆಯೆಲ್ಲಾ ಏಕಾಏಕಿ ನೀರಲ್ಲಿ ಕಲೆಸಿದ ಹೋಮವಾದಂತೆನ್ನಿಸಿ, ಮತ್ತೆ ಬಾಲ್ಯದ ಅದೇ ಚಡಪಡಿಕೆ ತನ್ನನ್ನು ಆವರಿಸಿಕೊಂಡಂತಾಗಿ, ಮೆಲ್ಲನೆದ್ದು ಚೌಕಿ ಹಾದು ಹೊರಾಂಗಳಕ್ಕೆ ಬಂದ.

ಅಂಗಳದಲ್ಲಿ ಇಬ್ಬರು ಮಕ್ಕಳು ಆಟವಾಡುತ್ತಿದ್ದರು. ಶಿವ್ರಾಮನ ಮೊಮ್ಮಕ್ಕಳಿರಬೇಕು. ಅವರನ್ನೇ ನೋಡುತ್ತಾ ಶ್ರೀಪಾದ ಬಾವಿಕಟ್ಟೆಗೆ ಹೋಗಿ ಒರಗಿ ನಿಂತು, ‘ಏನು ಮಕ್ಳೇ ನಿಮ್ ಹೆಸ್ರು?’ ಕೇಳಿದ. ಮಕ್ಕಳು ಮಾತನಾಡದೇ ಒಂದು ಕ್ಷಣ ಅವನನ್ನೇ ಮಿಕ ಮಿಕ ನೋಡಿದವು. ಇಬ್ಬರಲ್ಲಿ ದೊಡ್ಡವ, ಬಾವಿ ತೋರಿಸುತ್ತಾ, ‘ಹತ್ರ ಹೋಗ್ಬ್ಯಾಡಿ! ಅಮ್ಮಮ್ಮ ಇದ್ರಲ್ಲೇ ಬಿದ್ ಸತ್ತಿದ್ದು!’ ಎಂದವನೇ ಮತ್ತೆ ಆಟದಲ್ಲಿ ಮಗ್ನನಾದ.

ಶ್ರೀಪಾದನಿಗೆ ಒಂದು ಸಲ ಆಘಾತವಾಯಿತು. ‘ಯಾರು?’ ಮತ್ತೆ ಕೇಳಿದ. ಮಕ್ಕಳಿಬ್ಬರೂ ಮಾತನಾಡದೇ ಸಂದಿಯಿಂದ ಮನೆಯೊಳಗೆ ಹೋದವು. ಅವನು ಅವಾಕ್ಕಾಗಿ ಅದೆಷ್ಟು ಹೊತ್ತು ಬಾವಿ ಕಟ್ಟೆಗೊರಗಿ ಹಾಗೇ ನಿಂತಿದ್ದನೋ? ಒಳಗಿನಿಂದ ಜೋರು ಧ್ವನಿಯಲ್ಲಿ ಆಡುತ್ತಿದ್ದ ಮಾತುಗಳು ಹೊರಗಿನ ಅಂಗಳಕ್ಕೂ ಕೇಳುತ್ತಿದ್ದವು. ಮಾತುಗಳಿಂದ ದೂರಾಗುವ ಉದ್ದೇಶದಿಂದಲೋ ಎಂಬಂತೆ ಅವನು ಬಾವಿಕಟ್ಟೆ ಬಳಸಿ, ಮುಂದೆ ಹೋಗುತ್ತಿದ್ದಂತೇ ಬಾಲ್ಯದ ಅದೇ ಹೂವಿನ ಸುವಾಸನೆ ಸೆಳೆದಂತಾಗಿ, ಕೆಳಗೆ ನೋಡಿದಾಗ ರಂಜೆಯ ಮರ ಮಣ್ಣಿನ ಕಾಲು ದಾರಿಯುದ್ದಕ್ಕೂ ಹೂ ಉದುರಿಸಿ ನಿಂತಿತ್ತು. ಬೆಳಗ್ಗೆ ಮನೆ ಪ್ರವೇಶಿಸುವಾಗ ಹೂವನ್ನು ತಾನು ಗಮನಿಸಿರಲಿಲ್ಲವೆನ್ನುವುದು ನೆನಪಾಯಿತು. ಅದೇ ದಾರಿಯಾಗಿ ಸಾಗುತ್ತಾ ನಕ್ಷತ್ರಾಕಾರದಲ್ಲಿ ನೆಲಕ್ಕುರುಳಿ ಆರ್ದ್ರ ಸುಗಂಧ ಪಸರಿಸುತ್ತಾ ಬೆಳ್ಳಗೆ ಹರಡಿಕೊಂಡಿದ್ದ ರಂಜೆಯ ಹೂವನ್ನು ಮೆಲ್ಲಗೆ ಬಗ್ಗಿ ಒಂದೊಂದೇ ಆರಿಸಿ, ಮೃದುವಾಗಿ ಎತ್ತಿ ಆಘ್ರಾಣಿಸುತ್ತಾ ಚೈತ್ರಾಗೆ ಕೊಡಲೆಂದು ಮಗೆದು ಜೇಬಿನೊಳಗೆ ತುಂಬಿಕೊಳ್ಳತೊಡಗಿದ.


**ಜಯಶ್ರೀ ಕಾಸರವಳ್ಳಿ**

ಸೂಕ್ಷ್ಮಸಂವೇದನೆಯ ಕನ್ನಡ ಬರಹಗಾರ್ತಿ ಜಯಶ್ರೀ ಅವರ ಕಥಾಸಂಗ್ರಹಗಳು: ‘ತಂತಿ ಬೇಲಿಯ ಒಂಟಿ ಕಾಗೆ’. ‘ದಿನಚರಿಯ ಕಡೇ ಪುಟದಿಂದ...’ ಲ್ಯಾಟಿನ್ ಅಮೆರಿಕದ ಬರಹಗಾರ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್ ಕತೆಗಳನ್ನು ಅವರು ಕನ್ನಡಕ್ಕೆ ತಂದಿದ್ದಾರೆ. ಮಕ್ಕಳ ಕತೆಗಳ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.